## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಗಿ ಅನುಷ್ಠಾನಗೊಳಿಸಲು ತಾಲ್ಲೂಕು ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಕನ್ನಡ ಜಾಗೃತಿ ಸಮಿತಿಗಳನ್ನು ರಚಿಸುವ ಬಗ್ಗೆ.

ಓದಲಾಗಿದೆ :- ದಿನಾಂಕ 11-2-97ರಂದು ಕರ್ನಾಟಕದ ಸನ್ಮಾನ್ಯ ರಾಜ್ಯಪಾಲರು ರಾಜ್ಯ ವಿಧಾನಮಂಡಲದಲ್ಲಿ ಮಾಡಿದ ಭಾಷಣ.

**ಪ್ರಸ್ತಾವನೆ :**

ಕರ್ನಾಟಕದ ಸನ್ಮಾನ್ಯ ರಾಜ್ಯಾಪಾಲರು ರಾಜ್ಯ ವಿಧಾನಮಂಡಲದಲ್ಲಿ ದಿನಾಂಕ 11-2-97ರಂದು ಮಾಡಿದ ಭಾಷಣದಲ್ಲಿ ಕೆಳಕಂಡಂತೆ ಘೋಷಣೆಗಳನ್ನು ಮಾಡಲಾಗಿರುತ್ತದೆ :

''ನನ್ನ ಸರ್ಕಾರವು ರಾಜ್ಯದಲ್ಲಿ ಕನ್ನಡ ಭಾಷೆಗೆ ಪರಮೋಚ್ಚ ಸ್ಥಾನವನ್ನು ನಿಡುವುದಕ್ಕೆ ಬದ್ಧವಾಗಿದೆ. ಆಡಳಿತವು ಎಲ್ಲಾ ಹಂತಗಳಲ್ಲೂ ಜನರ ಭಾಷೆಯಲ್ಲಿ ನಡೆದಾಗ ಮಾತ್ರ ಅದು ಸ್ಪಂದನಶಿಲವಾಗುತ್ತದೆ. ನನ್ನ ಸರ್ಕಾರವು ಕನ್ನಡ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ತಹಶಿಲ್ದಾರರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದಲ್ಲಿ ಕನ್ನಡ ಜಾಗೃತಿ ಸಮಿತಿಗಳನ್ನು ರಚಿಸಲು ಉದ್ದೇಶಿಸಿದೆ. ಇದೇ ರಿತಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಕನ್ನಡ ಜಾಗೃತಿ ಸಮಿತಿಗಳನ್ನು ರಚಿಸಲು ಉದ್ದೇಶಿಸಿದೆ. ಈ ಸಮಿತಿಗಳು ಸರ್ಕಾರದ ಭಾಷಾ ನಿತಿಯ ಅನುಷ್ಠಾನದಲ್ಲಿ ಜನರೂ ಪಾಲ್ಗೊಳ್ಳುವಂತೆ ನೋಡಿಕೊಳ್ಳುತ್ತವೆ........''

ಆದ್ದರಿಂದ ಈ ವಿಷಯದಲ್ಲಿ ಕೆಳಕಂಡ ಆದೇಶಗಳನ್ನು ಹೊರಡಿಸಲಾಗಿದೆ.

ಆದೇಶ ಸಂಖ್ಯೆ : ಸಂಕಇ 18 ಕೆಓಎಲ್ 97,

ಬೆಂಗಳೂರು, ದಿನಾಂಕ 21ನೇ ಅಕ್ಟೋಬರ್ 1997

ರಾಜ್ಯದಲ್ಲಿ ಕನ್ನಡ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಹಾಗೂ ಸರ್ಕಾರದ ಭಾಷಾ ನೀತಿ ಅನುಷ್ಠಾನದಲ್ಲಿ ಜನರು ಪಾಲ್ಗೊಳ್ಳುವಂತೆ ನೋಡಿಕೊಳ್ಳಲು ಜಿಲ್ಲಾ ಮಟ್ಟದಲ್ಲಿ ತಾಲ್ಲೂಕು ಮಟ್ಟದಲ್ಲಿ ಮತ್ತು ನಗರ ಪಾಲಿಕೆಗಳ ಮಟ್ಟದಲ್ಲಿ ಕನ್ನಡ ಜಾಗೃತಿ ಸಮಿತಿಗಳನ್ನು ಕೆಳಕಂಡಂತೆ ರಚಿಸಲಾಗಿದೆ.

I. ಜಿಲ್ಲಾ ಕನ್ನಡ ಜಾಗೃತಿ ಸಮಿತಿ (ಪ್ರತಿ ಜಿಲ್ಲೆಗಳಲ್ಲಿ) :

| | | |
|---|---|---|
| 1. | ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2. | ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು | ಸದಸ್ಯರು |
| 3. | ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯರು |
| 4. | ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು | ಸದಸ್ಯರು |
| 5. | ನಾಮ ನಿರ್ದೇಶನಗೊಳ್ಳುವ ಅಧಿಕಾರೇತರ ಸದಸ್ಯರು (ಐದು ಜನರು) | ಸದಸ್ಯರು |
| 6. | ಜಿಲ್ಲೆಯ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ಸದಸ್ಯರು |

II. ತಾಲ್ಲೂಕು ಕನ್ನಡ ಜಾಗೃತಿ ಸಮಿತಿ (ಪ್ರತಿ ತಾಲ್ಲೂಕಿನಲ್ಲಿ)

| | | |
|---|---|---|
| 1. | ತಹಶಿಲ್ದಾರರು | ಅಧ್ಯಕ್ಷರು |
| 2. | ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯತ್ | ಸದಸ್ಯರು |

3. ಕ್ಷೇತ್ರ ಶಿಕ್ಷಣಾಧಿಕಾರಿಗಳು (ಬಿಇಒ),

ಸಾರ್ವಜನಿಕ ಶಿಕ್ಷಣ ಇಲಾಖೆ — ಸದಸ್ಯರು

4. ನಾಮ ನಿರ್ದೇಶನಗೊಳ್ಳುವ ಅಧಿಕಾರೇತರ

ಸದಸ್ಯರು (ಐದು ಜನರು) — ಸದಸ್ಯರು

5. ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್, ತಾಲ್ಲೂಕು ಘಟಕ — ಸದಸ್ಯರು

III. (1) ಬೆಂಗಳೂರು ಮಹಾನಗರ ಪಾಲಿಕೆ ಕನ್ನಡ ಜಾಗೃತಿ ಸಮಿತಿ, ಬೆಂಗಳೂರು

1. ಆಯುಕ್ತರು, ಬೆಂಗಳೂರು ಮಹಾನಗರ ಪಾಲಿಕೆ — ಅಧ್ಯಕ್ಷರು

2. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ — ಸದಸ್ಯರು

3. ಉಪನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಬೆಂಗಳೂರು ವಿಭಾಗ — ಸದಸ್ಯರು

4. ನಾಮ ನಿರ್ದೇಶನಗೊಳ್ಳುವ ಅಧಿಕಾರೇತರ ಸದಸ್ಯರು (ಐದು ಜನರು) — ಸದಸ್ಯರು

5. ಉಪ ಆಯುಕ್ತರು, ಬೆಂಗಳೂರು ಮಹಾನಗರ ಪಾಲಿಕೆ (ಆಡಳಿತ) — ಕಾರ್ಯದರ್ಶಿ

(2) ಬೆಂಗಳೂರು ಮಹಾನಗರ ಪಾಲಿಕೆ ಮತಕ್ಷೇತ್ರ ಮಟ್ಟದ ಕನ್ನಡ ಜಾಗೃತಿ ಸಮಿತಿ :

ಮತಕ್ಷೇತ್ರ :

| | | | |
|---|---|---|---|
| 1) ಬಸವನಗುಡಿ | 2) ಗಾಂಧಿನಗರ | 3) ಜಯಮಹಲ್ | 4) ಶಾಂತಿನಗರ |
| 5) ಬಿನ್ನಿಪೇಟೆ | 6) ಜಯನಗರ | 7) ಮಲ್ಲೇಶ್ವರ | 8) ರಾಜಾಜಿನಗರ |
| 9) ಶಿವಾಜಿನಗರ | 10) ಚಾಮರಾಜಪೇಟೆ | 11) ಚಿಕ್ಕಪೇಟೆ | 12) ಭಾರತಿನಗರ |

1. ಉಪ ಕಂದಾಯ ಅಧಿಕಾರಿಗಳು — ಅಧ್ಯಕ್ಷರು

2. ನಾಮ ನಿರ್ದೇಶನಗೊಳ್ಳುವ ಅಧಿಕಾರೇತರ ಸದಸ್ಯರು — ಸದಸ್ಯರು

3. ಆಯಾ ಮತಕ್ಷೇತ್ರದ ಕನ್ನಡ ಸಾಹಿತ್ಯ ಪರಿಷತ್ತಿನ ಘಟಕದ ಅಧ್ಯಕ್ಷರು ಸದಸ್ಯರು

4. ಸಹಾಯಕ ಕಂದಾಯ ಅಧಿಕಾರಿ ಸದಸ್ಯ ಕಾರ್ಯದರ್ಶಿ

(3) ಕನ್ನಡ ಜಾಗೃತಿ ಸಮಿತಿ

ಮೈಸೂರು; ಬೆಳಗಾವಿ; ಹುಬ್ಬಳ್ಳಿ-ಧಾರವಾಡ; ಗುಲ್ಬರ್ಗಾ ಮತ್ತು ಮಂಗಳೂರು ಮಹಾನಗರ ಪಾಲಿಕೆ

1. ಆಯುಕ್ತರು ಅಧ್ಯಕ್ಷರು

2. ಉಪನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರು, ಬೆಳಗಾಂ, ಗುಲ್ಬರ್ಗಾ ವಿಭಾಗ ಸದಸ್ಯರು

3. ನಾಮ ನಿರ್ದೇಶನಗೊಳ್ಳುವ ಅಧಿಕಾರೇತರ ಸದಸ್ಯರು (ಆರು ಜನರು) ಸದಸ್ಯರು

4. ಪ್ರತಿ ನಗರಪಾಲಿಕೆಯ ಕಂದಾಯ ಅಧಿಕಾರಿ ಸದಸ್ಯ ಕಾರ್ಯದರ್ಶಿ

2. ಕನ್ನಡ ಜಾಗೃತಿ ಸಮಿತಿಗಳು ತಮ್ಮ ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಕನ್ನಡ ಅಭಿವೃದ್ಧಿಗೆ ಸಂಬಂಧಪಟ್ಟ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಆಡಳಿತ ನಿಯಂತ್ರಣದಲ್ಲಿ ಹಾಗೂ ಪ್ರಾಧಿಕಾರದ ಮಾರ್ಗದರ್ಶನದಲ್ಲಿ ಕೆಲಸವನ್ನು ನಿರ್ವಹಿಸುವುದು.

3. ಕನ್ನಡ ಬಳಕೆ ಅನುಷ್ಠಾನದ ಜವಾಬ್ದಾರಿ ಹೊಂದಿರುವ ತಹಶಿಲ್ದಾರ್ ಮತ್ತು ಜಿಲ್ಲಾಧಿಕಾರಿಗಳಿಗೆ ಪೂರಕವಾಗಿ ಕೆಲಸ ಮಾಡುವುದು ಸದಸ್ಯರ ಕರ್ತವ್ಯ. ಮಹಾನಗರ ಪಾಲಿಕೆಗಳಿಗೆ ರಚಿಸಲಾದ ಕನ್ನಡ ಜಾಗೃತಿ ಸಮಿತಿ ಸದಸ್ಯರುಗಳು ಕನ್ನಡ ಅನುಷ್ಠಾನದ ಕಾರ್ಯಚಟುವಟಿಕೆಗಳಲ್ಲಿ ಸಮಿತಿ ಅಧ್ಯಕ್ಷರಿಗೆ ಪೂರಕವಾಗಿ ಕೆಲಸ ಮಾಡುವುದು ಅವರ ಕರ್ತವ್ಯ. ಅವರು ತಾವಾಗಿಯೇ ಯಾವುದೇ ಕಛೇರಿಯ ಪರಿಶಿಲನೆಗೆ ಹೋಗುವಂತಿಲ್ಲ. ಆಡಳಿತದಲ್ಲಿ ಕನ್ನಡ

ಯಾವುದೇ ಕಛೇರಿಯಲ್ಲಿ ಸಮರ್ಪಕವಾಗಿ ಬಳಕೆಯಾಗದೇ ಇರುವ ಬಗ್ಗೆ ತಿಳಿದು ಬಂದಾಗ ಸದರಿ ವಿಷಯವನ್ನು ಸಮಿತಿಯ ಅಧ್ಯಕ್ಷರ ಗಮನಕ್ಕೆ ತಂದು ಅವರು ನಿಗದಿಪಡಿಸಿದ ದಿನಾಂಕದಂದು ಅವರೊಂದಿಗೆ ಪರಿಶಿಲನಗೆಗೆ ಹೋಗುವುದು.

4. ಪ್ರತಿ ಕನ್ನಡ ಜಾಗೃತಿ ಸಮಿತಿಗಳು ಆರ್ಥಿಕ ವರ್ಷದಲ್ಲಿ ಮೂರು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು.

5. ಆಯಾ ಭಾಗದ : ಜಿಲ್ಲೆಯ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರನ್ನು ಸಭೆಗೆ ವಿಶೇಷ ಆಹ್ವಾನಿತರನ್ನಾಗಿ ಆಹ್ವಾನಿಸಬೇಕು.

6. ಕನ್ನಡ ಜಾಗೃತಿ ಸಮಿತಿಗಳ ಸಭೆಯ ನಡವಳಿಕೆಗಳನ್ನು ಕಳುಹಿಸಿಕೊಡುವ ಬಗ್ಗೆ:-

1. ತಾಲ್ಲೂಕು ಕನ್ನಡ ಜಾಗೃತಿ ಸಮಿತಿ ಸಭೆಯ ನಡವಳಿಗಳನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸುವುದು ಮತ್ತು ಒಂದು ಪ್ರತಿಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಿಗೆ ಕಳುಹಿಸುವುದು.

2. ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸಭೆಯ ನಡವಳಿಗಳನ್ನು ಮತ್ತು ಆಯಾ ಜಿಲ್ಲೆಯ ತಾಲ್ಲೂಕು ಜಾಗೃತಿ ಸಮಿತಿಗಳ ಕ್ರೋಢೀಕೃತ ವರದಿಗಳನ್ನು ಜಿಲ್ಲಾಧಿಕಾರಿಗಳು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಿಗೆ ಕಳುಹಿಸುವುದು.

3. ಬೆಂಗಳೂರು ಮಹಾನಗರ ಪಾಲಿಕೆಯ ಕನ್ನಡ ಜಾಗೃತಿ ಸಮಿತಿ ಸಭೆಯ ನಡವಳಿಗಳನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಿಗೆ ಕಳುಹಿಸಿ, ಅದರ ಒಂದು ಪ್ರತಿಯನ್ನು ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಮಾಹಿತಿಗಾಗಿ ಕಳುಹಿಸುವುದು.

4. ಇತರ ಮಹಾನಗರ ಪಾಲಿಕೆಯ ಕನ್ನಡ ಜಾಗೃತಿ ಸಮಿತಿಯ ನಡವಳಿಗಳನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಕಳುಹಿಸಿ, ಪ್ರತಿಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಿಗೆ ಕಳುಹಿಸುವುದು.

7. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಜಿಲ್ಲಾ ಮಟ್ಟದ ಸಮಿತಿಗಳಿಗೆ ಸದಸ್ಯ ಕಾರ್ಯದರ್ಶಿಗಳಾಗಿ ಕೆಲಸ ನಿರ್ವಹಿಸಬೇಕು. ತಾಲ್ಲೂಕು ಮಟ್ಟದ ಸಮಿತಿಗಳಿಗೆ ಸದಸ್ಯ ಕಾರ್ಯದರ್ಶಿಗಳ ಅವಶ್ಯಕತೆ ಇಲ್ಲ. ತಾಲ್ಲೂಕು ಮಟ್ಟದ ಸಮಿತಿಯ ಸಭೆಯನ್ನು ಸದರಿ ಅಧ್ಯಕ್ಷರುಗಳಾದ ಆಯಾ ತಾಲ್ಲೂಕು ತಹಶಿಲ್ದಾರರರು ಕರೆಯಬೇಕು.

8. ಕನ್ನಡ ಜಾಗೃತಿ ಸಮಿತಿಯ ಸಭೆಯಲ್ಲಿ ಭಾಗವಹಿಸಿದ ಅಧಿಕಾರೇತರ ಸದಸ್ಯರು ಸರ್ಕಾರದ ಸ್ಥಾಯಿ ಆದೇಶದನ್ವಯ ಪ್ರವಾಸ ಮತ್ತು ಉಪಸ್ಥಿತಿ ಭತ್ಯೆ ಪಡೆಯಲು ಅರ್ಹರಿರುತ್ತಾರೆ. ಈ ವೆಚ್ಚವನ್ನು 1997-98ನೇ ಸಾಲಿನಲ್ಲಿ ಲೆಕ್ಕ ಶಿರ್ಷಿಕೆ 2205-00-102-0-74 ''ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಯೋಜನೆಗಳು (ಯೋಜನೆಗಳು)'' ಯಲ್ಲಿ ಭರಿಸುವುದು.

9. ಕನ್ನಡ ಜಾಗೃತಿ ಸಮಿತಿಯ ಸದಸ್ಯರು ಪಾಲಿಸಬೇಕಾದ ನಿಯಮಗಳು :

1. ಸದಸ್ಯರುಗಳು ತಮ್ಮ ಸದಸ್ಯತ್ವದ ಪ್ರಭಾವವನ್ನು ಬೀರಿ, ಸರ್ಕಾರಿ ಕಛೇರಿಯ ಕಾರ್ಯಕಲಾಪಗಳಲ್ಲಿ ಹಸ್ತಕ್ಷೇಪ ಮಾಡಕೂಡದು.

2. ಸಮಿತಿಯ ಸದಸ್ಯತ್ವದ ರಬ್ಬರ್ ಮೊಹರುಗಳನ್ನಾಗಲಿ ಅಥವಾ ಭೇಟಿ ಚೀಟಿ (ವಿಸಿಟಿಂಗ್ ಕಾರ್ಡ್) ಮತ್ತು ಶೀರ್ಷಿಕೆಯುಳ್ಳ ಪತ್ರ (ಲೆಟರ್ ಹೆಡ್) ಗಳನ್ನಾಗಲಿ ಬಳಸಬಾರದು.

10. ಅಧಿಕಾರೇತರ ಸದಸ್ಯರ ನಾಮನಿರ್ದೇಶನಗಳನ್ನು ಪ್ರತ್ಯೇಕವಾಗಿ ಮಾಡಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
ಸಹಿ/-
**(ಹುಲಿಯಪ್ಪ)**
ಕರ್ನಾಟಕ ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಆಡಳಿತ ಕನ್ನಡ ಶಾಖೆ)

ಗೆ:

1) ಸರ್ಕಾರದ ಎಲ್ಲ ಕಾರ್ಯದರ್ಶಿಗಳಿಗೆ,
2) ಎಲ್ಲಾ ವಿಭಾಗಾಧಿಕಾರಿಗಳಿಗೆ,
3) ಎಲ್ಲಾ ಜಿಲ್ಲಾಧಿಕಾರಿಗಳಿಗೆ,
4) ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
5) ಎಲ್ಲಾ ಸದಸ್ಯರುಗಳಿಗೆ,
6) ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ನೃಪತುಂಗ ರಸ್ತೆ, ಬೆಂ.
7) ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಆಪ್ತ ಕಾರ್ಯದರ್ಶಿ: ಕಾರ್ಯದರ್ಶಿ.
8) ರಕ್ಷಾ ಕಡತ